ಹಸಿರು ಪಠ್ಯ ಚೌಕಟ್ಟುಗಳಲ್ಲಿ ಎಪಿಎ ಮಾದರಿ ಮಾರ್ಗದರ್ಶನಗಳನ್ನು ನೀಡಲಾಗಿದೆ.

ನೀಲಿ ಚೌಕಟ್ಟುಗಳಲ್ಲಿ ಎಪಿಎ ಮಾದರಿಯಲ್ಲಿ ಬರೆಯಲು ಅಥವಾ ಅದನ್ನು ಉದ್ಧರಿಸಲು ನಿರ್ದೇಶನಗಳನ್ನು ನೀಡಲಾಗಿದೆ.

ಶೀರ್ಷಿಕೆಯು ಪ್ರಬಂಧದ ಮುಖ್ಯ ತತ್ವವನ್ನು ಸಾರಾಂಶೀಕರಿಸಬೇಕು, ಚರ್ಚೆಯಲ್ಲಿ ಮಾರ್ಪಾಟಾಗುವ (Variables) ಅಂಶಗಳನ್ನು ಮತ್ತು ಅವುಗಳ ನಡುವಿನ ಸಂಬಂಧವನ್ನು ಗುರುತಿಸಬೇಕು.

ಎಲ್ಲ ಪುಟಗಳಲ್ಲೂ ಬರುವ ಪುಟ ಶೀರ್ಷಿಕೆಯು, ಪ್ರಬಂಧದ ಮುಖ್ಯ ಶೀರ್ಷಿಕೆಯ ಚುಟುಕಾದ ರೂಪವಾಗಿದೆ. ಪ್ರಕಟಿತ ಲೇಖನಗಳ ಶೀರ್ಷಿಕೆಯನ್ನು ಓದುಗರು ಗುರುತಿಸಲು ಸಾಧ್ಯವಾಗಲಿ ಎಂಬುದು ಅದರ ಉದ್ದೇಶ. ನಿಮ್ಮ ಪ್ರಬಂಧಕ್ಕೆ ಪ್ರಕಟಣೆಯ ಉದ್ದೇಶ ಇಲ್ಲದಿದ್ದರೂ ಅದಕ್ಕೆ ಹೀಗೆ ಪ್ರತಿಪುಟದಲ್ಲೂ ಕಾಣುವ ಪುಟ ಶೀರ್ಷಿಕೆ ಇರತಕ್ಕದ್ದು.

# ಅಂತರ್ಜಾಲ ಸಂವಹನದ ವಿಭಿನ್ನ ವ್ಯಾಖ್ಯಾನಗಳು ಮತ್ತು ಸಂಬಂಧಗಳ ಸಂಶೋಧನೆಯ ಮೇಲೆ ಅವುಗಳ ಪರಿಣಾಮ

**ಎಲಿಜಬೆತ್. ಎಲ್, ಏಂಜೆಲಿ, ಸ್ಟೇಟ್ ವಿಶ್ವವಿದ್ಯಾಲಯ**

ಶೀರ್ಷಿಕೆಯನ್ನು ಪುಟದ ಕೇಂದ್ರದಲ್ಲಿ ಮುದ್ರಿಸಬೇಕು ಮತ್ತು ಅದನ್ನು 12-ಪಾಯಿಂಟ್ ನ್ಯೂ ರೋಮನ್ ಫಾಂಟ್‌ಗಳಲ್ಲಿ ಅಚ್ಚು ಮಾಡಬೇಕು. ಆದರೆ ಅದನ್ನು ಬೋಲ್ಡ್ ಮಾಡಬಾರದು, ಕೆಳಗೆ ಗೆರೆ ಎಳೆಯಬಾರದು ಅಥವಾ ಇಟಾಲಿಕ್ ಮಾದರಿ ಅಕ್ಷರದಲ್ಲೂ ಟೈಪ್ ಮಾಡಬಾರದು.

ಲೇಖಕರ ಹೆಸರು ಸಂಸ್ಥೆ ಇವುಗಳನ್ನು ಮಧ್ಯಭಾಗದಲ್ಲಿ ಎರಡಕ್ಷರ ಜಾಗ ಖಾಲಿ ಬಿಟ್ಟು ಮುದ್ರಿಸಬೇಕು.

ಪುಟ ಶೀರ್ಷಿಕೆಯಲ್ಲಿ ಖಾಲಿ ಜಾಗ ಮತ್ತು ಚಿಹ್ನೆಗಳು ಸೇರಿ ಐವತ್ತು ಅಕ್ಷರ ಜಾಗಕ್ಕಿಂತ ಹೆಚ್ಚಿರಬಾರದು. ಪುಟ ಶೀರ್ಷಿಕೆ ದೊಡ್ಡ ಅಕ್ಷರಗಳಲ್ಲೇ ಇರಬೇಕು. ಅದು ಎಡಕ್ಕಿರಬೇಕು ಮತ್ತು ಪುಟ ಸಂಖ್ಯೆ ಬಲಕೊನೆಗೆ ಇರಬೇಕು. ಶೀರ್ಷಿಕೆ ಪುಟದಲ್ಲಿ ಪುಟ ಶೀರ್ಷಿಕೆಯ ಪಕ್ಕದಲ್ಲೇ "ಪುಟ ಶೀರ್ಷಿಕೆ" ಎಂದು ಮುದ್ರಿಸಿರಬೇಕು. ಮುಂದಿನ ಎಲ್ಲ ಪುಟಗಳಲ್ಲೂ ಪುಟ ಶೀರ್ಷಿಕೆಯನ್ನು ದೊಡ್ಡ ಅಕ್ಷರಗಳಲ್ಲಿ ಮುದ್ರಿಸಿ ಪಕ್ಕದಲ್ಲೇ "ಪುಟ ಶೀರ್ಷಿಕೆ" ಎಂದು ನಮೂದಿಸಬೇಕು.

## ಲೇಖಕರ ಮಾಹಿತಿ

ಎಲಿಜಬೆತ್ ಎಲ್ ಏಂಜೆಲಿ, ಮನಃಶಾಸ್ತ್ರ ವಿಭಾಗ, ಸ್ಟೇಟ್ ವಿಶ್ವವಿದ್ಯಾಲಯ

ಎಲಿಜಬೆತ್ ಏಂಜೆಲಿಯವರು ಈಗ ಪರ್‌ಡ್ಯೂ ವಿಶ್ವವಿದ್ಯಾಲಯದ ಇಂಗ್ಲೀಷ್ ವಿಭಾಗದಲ್ಲಿದ್ದಾರೆ. ಈ ಸಂಶೋಧನೆಗೆ ಸ್ಯಾಂಪಲ್ ಗ್ರಾಂಟ್ ಕಾರ್ಯಕ್ರಮದಿಂದ ಭಾಗಶಃ ನೆರವು ದೊರೆತಿದೆ.

ಈ ಲೇಖನಕ್ಕೆ ಸಂಬಂಧಿಸಿದ ಎಲ್ಲ ಪತ್ರ ವ್ಯವಹಾರವನ್ನೂ ಎಲಿಜಬೆತ್ ಏಂಜೆಲಿ, ಇಂಗ್ಲಿಷ್ ವಿಭಾಗ, ಪರ್‌ಡ್ಯೂ ವಿಶ್ವವಿದ್ಯಾಲಯ, ವೆಸ್ಟ್ ಲಫಾಯೆಟ್ಟೆ, ಐಎನ್ 55555 ಇವರೊಂದಿಗೆ ಮಾಡತಕ್ಕದ್ದು. ಸಂಪರ್ಕ: author@boiler.edu

ಮುದ್ರಿತ ಲೇಖನಗಳ ಮೇಲೆ ಲೇಖಕರ ಮಾಹಿತಿ ಇರಬೇಕು. ಲೇಖಕರ ವಿಭಾಗ ಮತ್ತು ಸಂಸ್ಥೆ ಎಲ್ಲಿಗೆ ಸೇರ್ಪಡೆಯಾಗಿದೆ, ಸೇರ್ಪಡೆಯಲ್ಲಿ ಬದಲಾವಣೆ ಇದೆಯೇ ಇದೆಲ್ಲವನ್ನೂ ಅಲ್ಲಿ ನಮೂದಿಸಿರಬೇಕು. ಹಾಗೆಯೇ ಕೃತಜ್ಞತಾ ಹೇಳಿಕೆ ಇದ್ದರೆ, ಹಣಕಾಸಿನ ನೆರವು ತೆಗೆದುಕೊಂಡಿದ್ದರೆ ಅದೆಲ್ಲವನ್ನೂ ಮತ್ತು ಸಂಪರ್ಕ ಮಾಹಿತಿಯನ್ನೂ ಅಲ್ಲಿ ಘೋಷಿಸಬೇಕು. ಹೆಚ್ಚಿನ ಮಾಹಿತಿಗಾಗಿ ಎಪಿಎ ಕೈಪಿಡಿ, 2.03, ಪುಟ 24-25ನ್ನು ನೋಡಿರಿ. ಸೂಚನೆ: ತರಗತಿ ಲೇಖನ, ಸಂಶೋಧನಾ ಪ್ರಬಂಧ (ಥೀಸಿಸ್) ಮತ್ತು ದೀರ್ಘ ಪ್ರಬಂಧ (ಡಿಸರ್ಟೇಶನ್) ಬರೆಯುವ ವಿದ್ಯಾರ್ಥಿಗಳಿಗೆ ಲೇಖಕರ ಮಾಹಿತಿ ಐಚ್ಛಿಕವಾದದ್ದು.

ಲೇಖಕರ ಮಾಹಿತಿ ಕೆಳಕಂಡಂತೆ ಇರಬೇಕು.
ಮೊದಲ ಪ್ಯಾರಾ: ವಿಭಾಗದ ಬಗ್ಗೆ ಮತ್ತು ಸಂಸ್ಥೆಯ ಸೇರ್ಪಡೆಯ ಬಗ್ಗೆ ಪೂರ್ತಿ ಮಾಹಿತಿ.
ಎರಡನೇ ಪ್ಯಾರಾ: ಸೇರ್ಪಡೆಯಲ್ಲಿ ಏನಾದರೂ ಬದಲಾವಣೆ ಇದ್ದರೆ ಅದು.
ಮೂರನೇ ಪ್ಯಾರಾ: ಕೃತಜ್ಞತೆಗಳು, ಹಣಕಾಸು ನೆರವಿನ ಮೂಲ, ವಿಶೇಷ ಸಂದರ್ಭಗಳು.
ನಾಲ್ಕನೆಯ ಪ್ಯಾರಾ: ಸಂಪರ್ಕ ಮಾಹಿತಿ (ಅಂಚೆ ವಿಳಾಸ ಮತ್ತು ಇ-ಮೇಲ್)

# ಅಂತರ್ಜಾಲ ಸಂವಹನ ಕುರಿತಾದ ವಿಭಿನ್ನ ಲಕ್ಷಣ ನಿರೂಪಣೆಗಳು

## ಸಾರಸಂಗ್ರಹ

ಸಾರಸಂಗ್ರಹವು ಒಂದು ಪ್ರಬಂಧದ ಚಿಕ್ಕ ಸಾರಾಂಶವಾಗಿರುತ್ತದೆ ಮತ್ತು ಪ್ರಬಂಧದ ಮುಖ್ಯಾಂಶ ಹಾಗೂ ಉದ್ದೇಶವನ್ನು ಕ್ಷಿಪ್ರವಾಗಿ ಅವಲೋಕಿಸಲು ಓದುಗರಿಗೆ ಅವಕಾಶ ಮಾಡಿಕೊಡುತ್ತದೆ.

ಸಾರಸಂಗ್ರಹವು ಯಾವಾಗಲೂ 150-250 ಪದಗಳಿಗೆ ಸೀಮಿತವಾಗಿರಬೇಕು. ಸಾರಸಂಗ್ರಹದಲ್ಲಿ ಪ್ರಬಂಧದಲ್ಲಿ ಉಪಯೋಗಿಸಿರುವ ಪ್ರಥಮಾಕ್ಷರ ಜೋಡಣೆ (ಅಬ್ರೀವಯೇಶನ್ಸ್) ಮತ್ತು ಪ್ರಥಮಾಕ್ಷರ ಸಂಯುಕ್ತ ಪದಗಳನ್ನು (ಅಕ್ರೊನಿಮ್ಸ್) ನಮೂದಿಸಬೇಕು.

ಸಾರಸಂಗ್ರಹ ಎಂಬ ಪದವನ್ನು 12ನೇ ಗಾತ್ರದ ಟೈಮ್ಸ್ ರೋಮನ್ ಮಾದರಿ ಅಕ್ಷರಗಳಲ್ಲಿ, ಪುಟ ಮಧ್ಯದಲ್ಲಿ ಬೆರಳಚ್ಚು ಮಾಡಿರಬೇಕು. ಸಾರಾಂಶದ ಪ್ಯಾರಾದ ಮೊದಲ ಸಾಲನ್ನು ಸ್ಥಳ ಬಿಟ್ಟು ಬೆರಳಚ್ಚು ಮಾಡುವುದು (ಇಂಡೆಂಟ್) ಬೇಡ. ಪ್ರಬಂಧದ ಉಳಿದ ಎಲ್ಲಾ ಪ್ಯಾರಾಗಳಲ್ಲೂ ಮೊದಲ ಸಾಲನ್ನು ಸ್ಥಳ ಬಿಟ್ಟು ಬೆರಳಚ್ಚು (ಇಂಡೆಂಟ್) ಮಾಡುವುದು.

ಆನ್‌ಲೈನ್ (ಅಂತರ್ಜಾಲದ) ಮತ್ತು ಆಫ್‌ಲೈನ್ (ಅಂತರ್ಜಾಲೇತರ) ಸಂಬಂಧಗಳ ಬಗೆಗೆ ಮತ್ತು ಅವು ಗಣಕಯಂತ್ರ ಮಧ್ಯಸ್ಥಿಕೆ ಸಂವಹನದ (ಕಂಪ್ಯೂಟರ್ ಮೀಡಿಯೇಟಡ್ ಕಮ್ಯುನಿಕೇಶನ್-ಸಿಎಂಸಿ) ಜೊತೆಗೆ ಹೊಂದಿರುವ ಸಂಬಂಧದ ಬಗೆಗೆ ನಡೆದ ಸಂಶೋಧನೆಯ ಫಲಿತಾಂಶವನ್ನು ವರದಿ ಮಾಡುವ ನಾಲ್ಕು ಪ್ರಕಟಿತ ಪ್ರಬಂಧಗಳನ್ನು ಈ ಲೇಖನವು ಶೋಧನೆಗೆ ಒಳಪಡಿಸಿದೆ. ಆದರೆ ಗಣಕಯಂತ್ರ ಮಧ್ಯಸ್ಥಿಕೆ ಸಂವಹನದ (ಸಿಎಂಸಿ) ಲಕ್ಷಣ ನಿರೂಪಣೆ ಹಾಗೂ ಉಪಯೋಗಗಳನ್ನು ಕುರಿತಂತೆ ಆ ಲೇಖನಗಳಲ್ಲಿ ಭಿನ್ನತೆಗಳಿವೆ. "ಇ ಮೇಲ್" ಎಂಬುದಾಗಿ ಕರೆಯಲ್ಪಟ್ಟ ಮತ್ತು ಉಪಯೋಗಿಸಲ್ಪಟ್ಟ ಸಿಎಂಸಿ ಗಿಂತ ಮುಖಾಮುಖಿ ಅಂತರ್ ಕ್ರಿಯೆಗಳು (ಫ಼ೇಸ್ ಟು ಫ಼ೇಸ್ –ಎಫ್ ಟಿಎಫ್) ಸಾಮಿಪ್ಯ ಅಥವಾ ಅನ್ಯೋನ್ಯತೆಯ ಭಾವನೆಗಳನ್ನು ಸೃಷ್ಟಿಸುವಲ್ಲಿ ಹೆಚ್ಚು ಪರಿಣಾಮಕಾರಿ ಎಂದು ಬಟ್ಲರ್ ಮತ್ತು ಕ್ರಾವುತ್ (2002) ಅಭಿಪ್ರಾಯಪಡುತ್ತಾರೆ. ಉಳಿದ ಲೇಖನಗಳು ಸಿಎಂಸಿ ಕುರಿತು ವಿಭಿನ್ನ ವ್ಯಾಖ್ಯಾನಗಳನ್ನು ಹೊಂದಿದ್ದು ಅದರಿಂದಾಗಿ ಬೇರೆಯದೇ ಆದ ಫಲಿತಾಂಶಗಳನ್ನು ಮುಂದಿಡುತ್ತವೆ. ಸಿಎಂಸಿ ಹೇಗೆ ಅಂತರ್ಜಾಲದ (ಆನ್‌ಲೈನ್) ಹಾಗೂ ಅದರ ಆಚೆಗಿನ

(ಆಫ್‌ಲೈನ್) ಸಂಬಂಧಗಳ ಮೇಲೆ ಪರಿಣಾಮಗಳನ್ನು ಬೀರುತ್ತದೆ ಎಂಬುದನ್ನು ಗ್ರಹಿಸಲು ಸಿಎಂಸಿಯ ಎಲ್ಲ ಸ್ವರೂಪಗಳನ್ನೂ ಅಧ್ಯಯನ ಮಾಡಬೇಕು ಎಂಬುದನ್ನು ಸೂಚಿಸಲು, ಈ ಲೇಖನವು ಇತರ ಮೂರು ಪ್ರಬಂಧಗಳ ಬಗೆಗೆ ಕಮಿಂಗ್ಸ್, ಬಟ್ಲರ್ ಹಾಗೂ ಕ್ರಾವುತ್ ಅವರು(2002) ಮಾಡಿರುವ ಅಧ್ಯಯನವನ್ನು ಶೋಧಿಸುತ್ತದೆ.

ಮುಖ್ಯಪದಗಳು: ಗಣಕಯಂತ್ರ ಮಧ್ಯಸ್ಥಿಕೆಯ ಸಂವಹನ, ಮುಖಾಮುಖಿ ಸಂವಹನ

## ಅಂತರ್ಜಾಲ ಸಂವಹನ ಕುರಿತಾದ ವಿಭಿನ್ನ ಲಕ್ಷಣ ನಿರೂಪಣೆಗಳು

ಅಂತರ್ಜಾಲ ಸಂವಹನ ಕುರಿತಾದ ವಿಭಿನ್ನ ಲಕ್ಷಣ ನಿರೂಪಣೆಗಳು ಮತ್ತು ಸಂಬಂಧ ಸಂಶೋಧನೆಯ ಮೇಲೆ ಅವುಗಳ ಪರಿಣಾಮ

ಪುಟದ ಮಧ್ಯದಲ್ಲಿ ಶೀರ್ಷಿಕೆ ಇರಲಿ, ಅದು ಟೈಂಸ್ ನ್ಯೂ ರೋಮನ್ ಮಾದರಿ ಅಕ್ಷರದಲ್ಲಿ 12ರ ಗಾತ್ರದಲ್ಲಿ ಇರಲಿ. ಅದರ ಕೆಳಗೆ ಗೆರೆ ಎಳೆಯುವುದಾಗಲಿ, ಅದನ್ನು ದಪ್ಪ ಅಕ್ಷರ ಅಥವಾ ಇಟಾಲಿಕ್ ಮಾದರಿ ಅಕ್ಷರದಲ್ಲಾಗಲೀ ಬೆರಳಚ್ಚು ಮಾಡುವುದು ಬೇಡ.

← ಲೇಖನದ ಶೀರ್ಷಿಕೆಯನ್ನು ಮಧ್ಯದಲ್ಲಿ ಮುದ್ರಿಸಲಾಗಿದೆ ಆದರೆ ದಪ್ಪ ಅಕ್ಷರಗಳನ್ನು ಉಪಯೋಗಿಸಿಲ್ಲ.

ಲೇಖನವು ಚರ್ಚಿಸುವ ಸಮಸ್ಯೆಗಳನ್ನು ಪೀಠಿಕೆಯು ಮುಂದಿಡಬೇಕು. ಪೀಠಿಕೆಗಳ ಕುರಿತು ಓಡಬ್ಲ್ಯೂಎಲ್ ಸಂಪನ್ಮೂಲಗಳನ್ನು ನೋಡಿರಿ: http://owl.english.purdue.edu/owl/resource/724/01/

ಪಠ್ಯ ಉಲ್ಲೇಖಗಳಿದ್ದಾಗ ಅವು ನೇರ ಹೇಳಿಕೆಗಳಾಗಿದ್ದರೆ, ಅವುಗಳಲ್ಲಿ ಲೇಖಕನ/ಲೇಖಕರ ಹೆಸರುಗಳು, ಪ್ರಕಟಣೆಯ ವರ್ಷ, ಪುಟ ಸಂಖ್ಯೆ/ಸಂಖ್ಯೆಗಳು ಇವೆಲ್ಲವನ್ನೂ ಹೆಸರಿಸಬೇಕು. ನೀವು ಯಾವುದಾದರೂ ಮೂಲವನ್ನು ನಿಮ್ಮದೇ ವಾಕ್ಯಗಳಲ್ಲಿ ಮತ್ತೆ ಹೇಳುತ್ತಿದ್ದರೆ ಆಗ ಮೂಲದಲ್ಲಿನ ಪುಟ ಸಂಖ್ಯೆಗಳನ್ನು ಸೇರಿಸುವ ಅಭ್ಯಾಸವನ್ನು ಎಪಿಎ ಉತ್ತೇಜಿಸುತ್ತದೆ. (ಸ್ಮಿತ್, 2009, ಪುಟ 76)

ಆಪ್ತತೆಯ ಮಟ್ಟಗಳು, ಸಾಮೀಪ್ಯತೆ, ವಿಭಿನ್ನ ಸಂವಹನದ ವಿಧಾನಗಳು ಮತ್ತು ಗಣಕಯಂತ್ರ ಮಧ್ಯಸ್ಥಿಕೆಯ ಸಂವಹನದ (ಸಿಎಂಸಿ) ಉಪಯೋಗವು ಎಷ್ಟರ ಮಟ್ಟಿಗೆ ಪದೇ ಪದೇ ಆಗುತ್ತಿದೆ ಎಂಬ ಅಂಶಗಳನ್ನು ಕೇಂದ್ರೀಕರಿಸಿ ಅಂತರ್ಜಾಲ ಸಂಬಂಧಗಳ ವಿವಿಧ ಮುಖಗಳನ್ನು ಕುರಿತು ಅನೇಕ ಅಧ್ಯಯನಗಳು ನಡೆದಿವೆ. ಅದೇನೇ ಇರಲಿ ಈ ಸಂಶೋಧನೆಯಲ್ಲಿ ಪರಸ್ಪರ ವಿರುದ್ಧವಾದ ಅನೇಕ ಫಲಿತಾಂಶಗಳು ಬಂದಿವೆ. ಏಕೆಂದರೆ ಇ-ಮೇಲ್‌ನಂತಹ ಕೆಲವೇ ಕೆಲವು ಸಿಎಂಸಿ

ಒಂದು ಲೇಖನದಲ್ಲಿ ಮೂರರಿಂದ ಐದರವರೆಗೆ ಲೇಖಕರಿದ್ದರೆ, ಮೊದಲ ಬಾರಿಗೆ ಎಲ್ಲ ಲೇಖಕರ ಹೆಸರು ಬಂದಾಗ ಅವುಗಳೆಲ್ಲವನ್ನೂ ಬರೆಯಿರಿ. ನಂತರ ಮೊದಲನೆಯ ಲೇಖಕರ ಹೆಸರಿನ ಉತ್ತರಾರ್ಧವನ್ನು ಬರೆದು ಅದರೊಂದಿಗೆ ಮತ್ತಿತರರು ಎಂದು ಸೇರಿಸುವುದು.

ಎಪಿಎ ಮಾದರಿಯಲ್ಲಿ ಪ್ರಕಟಣೆಯ ವರ್ಷವನ್ನು ನಮೂದಿಸುವುದು ಅವಶ್ಯಕ. ಏಕೆಂದರೆ ಎಪಿಎ ಅನ್ನು ಉಪಯೋಗಿಸುವವರು ಲೇಖನದ ದಿನಾಂಕಕ್ಕೆ ಮಹತ್ವ ನೀಡುತ್ತಾರೆ (ಅವರಿಗೆ ಅದು ಹೆಚ್ಚು ಹೆಚ್ಚು ಪ್ರಸ್ತುತವಾಗಿದ್ದಷ್ಟೂ ಉತ್ತಮ)

ಶೋಧನೆ ನಡೆದಿದೆ. ಕಮಿಂಗ್ ವಿಧಾನಗಳ ಬಗ್ಗೆ ಮಾತ್ರ 2002) ಸೂಚಿಸುವ ಹಾಗೆ, ಮುಖಾಮುಖಿ ಅಂತರ್ ಕ್ರಿಯೆಗಳು (ಎಫ್ ಟಿಎಫ್), ಆಪ್ತತೆ ಅಥವಾ ಸಾಮೀಪತ್ಯೆಯ ಭಾವನೆಗಳನ್ನು ಸೃಷ್ಟಿಸುವಲ್ಲಿ ಸಿಎಂಸಿ (ಇ-ಮೇಲ್) ಗಿಂತ ಹೆಚ್ಚು ಪರಿಣಾಮಕಾರಿ. ಆದರೆ ಉಳಿದ ಅಧ್ಯಯನಗಳು ಇದಕ್ಕೆ ವಿರುದ್ಧವಾದದ್ದನ್ನು ಹೇಳುತ್ತವೆ. ಸಿಎಂಸಿಯು ಯಾವ

ರೀತಿಯಲ್ಲಿ ಅಂತರ್ಜಾಲ ಮತ್ತು ಅಂತರ್ಜಾಲೇತರ ಸಂಬಂಧಗಳ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನು ಗ್ರಹಿಸಲು, ಎಲ್ಲ ಸ್ವರೂಪಗಳ ಸಿಎಂಸಿಯನ್ನೂ ಅಧ್ಯಯನ ಮಾಡಬೇಕಾಗುತ್ತದೆ. ಕಮಿಂಗ್ಸ್ ಮುಂತಾದವರ ಸಂಶೋಧನೆಯನ್ನು, ಸಿಎಂಸಿ ಕುರಿತಾದ ಇತರ ಸಂಶೋಧನೆಯೊಂದಿಗೆ ತುಲನೆಮಾಡಿ, ಸಂಬಂಧಗಳ ಮೇಲೆ ಅಂತರ್ಜಾಲ ಸಂವಹನವು ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಲು ಇನ್ನಷ್ಟು ಸಂಶೋಧನೆ ನಡೆಯಬೇಕಾಗಿದೆ ಎಂದು ಈ ಲೇಖನವು ಪ್ರತಿಪಾದಿಸುತ್ತದೆ.

## ಸಾಹಿತ್ಯ ಪುನರಾವಲೋಕನ

ಸಿಎಂಸಿ, ಅದರಲ್ಲೂ ವಿಶೇಷವಾಗಿ ಇ-ಮೇಲ್, ಆಪ್ತ ಸಾಮಾಜಿಕ ಸಂಬಂಧಗಳನ್ನು ಸೃಷ್ಟಿಸುವಲ್ಲಿ ಮತ್ತು ಅದನ್ನು ನಿರ್ವಹಿಸುವಲ್ಲಿ ಮುಖಾಮುಖಿ ಸಂಪರ್ಕಕ್ಕಿಂತ ಕಡಿಮೆ ಪರಿಣಾಮಕಾರಿ ಎಂದು ಅಂತರ್ಜಾಲದ ಸಾಮಾಜಿಕ ಸಂಬಂಧಗಳ ಕುರಿತು ನಡೆದ ಮೂರು ಅನುಭವಾಧಾರಿತ ಅಧ್ಯಯನಗಳನ್ನು ಪುನರ್‌ವಿಮರ್ಶೆಗೊಳಪಡಿಸಿದ ಕಮಿಂಗ್ಸ್ ಮುಂತಾದವರ (2002) ಸಂಗ್ರಹ ಲೇಖನದಲ್ಲಿ ಕಂಡುಕೊಳ್ಳಲಾಯಿತು. ಪುನರ್‌ವಿಮರ್ಶೆಗೊಳಗಾದ ಮೂರು ಅಧ್ಯಯನಗಳಲ್ಲಿ ಎರಡು ಅಧ್ಯಯನಗಳು, ಮುಖಾಮುಖಿ ವಿಧಾನ, ಫೋನ್ ಅಥವಾ ಇ-ಮೇಲ್ ವಿಧಾನಗಳನ್ನು ಉಪಯೋಗಿಸಿಕೊಂಡು ನಡೆಸಿದ ಅಂತರ್ಜಾಲ ಮತ್ತು ಅಂತರ್ಜಾಲೇತರ ಸಂಬಂಧಗಳನ್ನು ಕೇಂದ್ರೀಕರಿಸಿಕೊಂಡಿದ್ದು, ಅವು ಪ್ರತಿಯೊಂದೂ ಸಂವಹನ ವಿಧಾನವನ್ನು ಎಷ್ಟರಮಟ್ಟಿಗೆ ಪದೇ ಪದೇ ಉಪಯೋಗಿಸಿಕೊಂಡಿವೆ ಎಂಬುದರ ಆಧಾರದ ಮೇಲೆ ಆ ಸಂಬಂಧದ ಅಂತಃಶಕ್ತಿಯು ಗಮನಾರ್ಹವಾಗಿ ಅವಲಂಬಿತವಾಗಿದೆ ಎಂದು ತೀರ್ಮಾನಿಸಿದವು. ಅಧ್ಯಯನದಲ್ಲಿ ಭಾಗವಹಿಸಿದ್ದವರು ಮುಖಾಮುಖಿ ಮತ್ತು ದೂರವಾಣಿ ಸಂವಹನದಿಂದ ಬಂದ ಸಂಬಂಧದಲ್ಲಿನ ಅಂತಃಶಕ್ತಿಯು ಹೆಚ್ಚಿನದು ಎಂದು ಅಭಿಪ್ರಾಯಪಟ್ಟರು. ಮುಖಾಮುಖಿ ಹಾಗೂ ದೂರವಾಣಿ ಸಂಪರ್ಕಕ್ಕೆ ಹೋಲಿಸಿದರೆ. ಇ-ಮೇಲ್ ವಿಧಾನವು ವೈಯಕ್ತಿಕ ಸಂಬಂಧಗಳನ್ನು ನಿರ್ವಹಿಸುವಲ್ಲಿ ಕೆಳಮಟ್ಟದ ವಿಧಾನ ಎಂದು ಅವರು ಅಭಿಪ್ರಾಯಪಟ್ಟರು. (ಕಮಿಂಗ್ಸ್ ಮತ್ತು ಇತರರು, 2002).

ಕಮಿಂಗ್ಸ್ ಮತ್ತಿತರರು (2002), ಹೋಮ್‌ನೆಟ್ ಪ್ರಾಜೆಕ್ಟ್‌ನವರು 1999ರಲ್ಲಿ ಮಾಡಿದ ಹೆಚ್ಚುವರಿ ಅಧ್ಯಯನವೊಂದನ್ನು ಪುನರ್ವಿಮರ್ಶೆಗೆ ಒಳಪಡಿಸಿದರು (ಹೋಮ್‌ನೆಟ್ ಪ್ರಾಜೆಕ್ಟ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಅನುಬಂಧ 'ಎ' ಅನ್ನು ನೋಡಿರಿ). ಈ ಯೋಜನಾ ಅಧ್ಯಯನದಲ್ಲಿ ಸಂಗಾತಿಗಳೊಂದಿಗೆ ಸಂಬಂಧವನ್ನು ನಿರ್ವಹಿಸುವಲ್ಲಿ ಸಿಎಂಸಿ ಮತ್ತು ಸಿಎಂಸಿಯೇತರ ವಿಧಾನಗಳ ಮೌಲ್ಯವೆಷ್ಟು ಎಂಬುದನ್ನು ಕ್ರಾವುತ್, ಮುಖ್ಯೋಪಾಧ್ಯಾಯ್, ಜ್ಞೆಜ್ಞಿಪುಲ, ಕೀಸ್ಲರ್ ಮತ್ತು ಶೆರ್‌ಲಿಸ್ ಅವರು (1999) ತುಲನೆ ಮಾಡಿದರು. ಇದರಲ್ಲಿ ಭಾಗವಹಿಸಿದವರು ಪ್ರತಿ ತಿಂಗಳು ತಮ್ಮ ಅಂತರ್ಜಾಲೇತರ ಸಂಗಾತಿಗಳಿಗಿಂತ (ತಿಂಗಳಿಗೆ 7.2 ಬಾರಿ), ಅಂತರ್ಜಾಲ ಸಂಗಾತಿಗಳೊಂದಿಗೆ (ಪ್ರತಿ ತಿಂಗಳಿಗೆ 5.2 ಬಾರಿ) ಕಡಿಮೆ ಬಾರಿ ಸಂವಹನ ನಡೆಸಿದ್ದರು. (ಕಮಿಂಗ್ಸ್ ಮತ್ತಿತರರು-2002, ನೀಡಿದ ಉಲ್ಲೇಖ). ತಿಂಗಳಿಗೆ ಎರಡು ಬಾರಿಯಷ್ಟು ಮಾತ್ರ ಕಡಿಮೆ ಇರುವುದರಿಂದ ವ್ಯತ್ಯಾಸವು ಗಮನಾರ್ಹವಲ್ಲ ಅನಿಸುತ್ತದೆ. ಆದರೂ, ಹೆಚ್ಚುವರಿ ಸ್ವಯಂ-ವರದಿ ಸರ್ವೇಕ್ಷಣೆಗಳಲ್ಲಿ ಭಾಗವಹಿಸಿದವರು, ಅಂತರ್ಜಾಲೇತರ ಸಂಗಾತಿಗಳಿಗೆ ಹೋಲಿಸಿದರೆ ತಾವು ಅಂತರ್ಜಾಲದ ಸಂಗಾತಿಗಳೊಂದಿಗೆ ಕಡಿಮೆ ಆಪ್ತತೆಯನ್ನು ಹೊಂದಿರುವಂತೆ, ದೂರೀಕರಣಗೊಂಡಂತೆ ಭಾಸವಾಗುತ್ತದೆ ಎಂದು ಪ್ರತಿಕ್ರಿಯಿಸಿದರು. ವೈಯಕ್ತಿಕ ಸಂಬಂಧಗಳಲ್ಲಿನ ಸಂವಹನಕ್ಕೆ ಅಂತರ್ಜಾಲವು ಕೆಳಮಟ್ಟದ ವಿಧಾನವಾಗಿದೆ ಎಂಬ ಭಾಗವಹಿಸಿದವರ ಅನಿಸಿಕೆಯೇ ಈ ಫಲಿತಾಂಶಕ್ಕೆ ಕಾರಣ ಎಂದುಕೊಳ್ಳಬಹುದು.

ನಿಮ್ಮ ಲೇಖನಕ್ಕೆ ಪೂರಕವಾಗಿರುವ ದರೆ ನಿಮ್ಮ ಪಠ್ಯಕ್ಕೆ ನೇರವಾಗಿ ಸಂಬಂಧಿಸದಿರುವ ಕಿರಿದಾದ ತಿರುಳನ್ನು ನೀಡಲು ಅನುಬಂಧವನ್ನು ಉಪಯೋಗಿಸಿ.

ಆಪ್ತತೆ ಎಂದರೆ ತನ್ನ ಮನದಾಳದ ಭಾವನೆಯನ್ನು ಇನ್ನೊಬ್ಬ ವ್ಯಕ್ತಿಯೊಂದಿಗೆ ಹಂಚಿಕೊಳ್ಳುವುದು ಎಂದು ಲಕ್ಷಣೀಕರಿಸಿರುವುದರಿಂದ (ಹು, ವುಡ್, ಸ್ಮಿತ್ ಮತ್ತು ವೆಸ್ಟ್ ಬ್ರೂಕ್, 2004), ಸಂಬಂಧಗಳನ್ನು ಸೃಷ್ಟಿಸುವಲ್ಲಿ ಮತ್ತು ಅವುಗಳನ್ನು ನಿರ್ವಹಿಸುವಲ್ಲಿ ಆಪ್ತತೆಯು ಅವಶ್ಯವಾದದ್ದು. ಸಿಎಂಸಿ ಮೂಲಕವಾಗಲೀ ಸಿಎಂಸಿಯೇತರ ವಿಧಾನಗಳಿಂದಾಗಲೀ, ಸಂಗಾತಿಗಳು ತಮ್ಮ ಅಂತರಂಗವನ್ನು ಪರಸ್ಪರ ಒಬ್ಬರಿಗೊಬ್ಬರು ತೆರೆದಿಡುವ ಪ್ರಕ್ರಿಯೆಯಲ್ಲಿ ಸಂಬಂಧಗಳು ರೂಪುಗೊಳ್ಳುತ್ತವೆ. ಕಮಿಂಗ್ಸ್ ಮತ್ತಿತರರು (2002) ಪುನರ್ವಿಮರ್ಶೆಗೊಳಪಡಿಸಿದ ಫಲಿತಾಂಶಗಳು, ಸಿಎಂಸಿ ಮೂಲಕ ಬೆಳೆದ ಸಂಬಂಧಗಳು ಮತ್ತು ಆಪ್ತತೆಯ ನಡುವಣ ಕೊಂಡಿಯನ್ನು ಸಂಶೋಧಿಸಿದ ಇತರ ಅಧ್ಯಯನಗಳನ್ನು ವಿರೋಧಿಸುತ್ತವೆ.

ನೀವು ಅನುಬಂಧವನ್ನು ಉಪಯೋಗಿಸುವುದಿದ್ದರೆ ಅದನ್ನು ನಿಮ್ಮ ಲೇಖನದ ಪ್ರಧಾನ ಭಾಗದಲ್ಲಿಯೇ ಉಲ್ಲೇಖಿಸಿರಿ.

ಹು ಮತ್ತಿತರರು (2004) ತತ್ಕ್ಷಣ ಸಂದೇಶಗಳ (ಇನ್‌ಸ್ಟಂಟ್ ಮೆಸೇಜಿಂಗ್-ಐಎಮ್) ಬಳಕೆ ಮತ್ತು ಸ್ನೇಹಿತರ ನಡುವೆ ಇರತಕ್ಕಂತಹ ಆಪ್ತತೆ ಇವುಗಳ ನಡುವಿನ ಸಂಬಂಧವನ್ನು ಅಧ್ಯಯನ ಮಾಡಿದರು. ಇ-ಮೇಲ್‌ನ ಬದಲು ಐಎಮ್ ಅನ್ನು ಒಂದು ಸಿಎಂಸಿ ವಿಧಾನವನ್ನಾಗಿ ಉಪಯೋಗಿಸುವುದರ ಕುರಿತು ಅಧ್ಯಯನ ನಡೆಸಿದ್ದು ಏಕೆಂದರೆ, ಐಎಮ್ ಒಂದು ವೃತ್ತಿನಿರತರ ವಾತಾವರಣದಾಚೆ ಆಪ್ತವಾದ ಅಂತರ್‌ಕ್ರಿಯೆಗಳನ್ನು ಬೆಂಬಲಿಸುತ್ತದೆ ಎಂಬುದು (ಹು ಮತ್ತು ಇತರರು 2004). ಅವರ ಫಲಿತಾಂಶಗಳು ಐಎಂ ಬಳಕೆಯ ಹೆಚ್ಚಳ ಮತ್ತು ಆಪ್ತತೆಯ ನಡುವೆ ಒಂದು ಧನಾತ್ಮಕ ಸಂಬಂಧವಿದೆ ಎಂಬುದನ್ನು ಸೂಚಿಸುತ್ತದೆ. ಸಮಯ ಕಳೆದಂತೆ ಈ ಸಿಎಂಸಿ ವಿಧಾನದಿಂದಾಗಿ ಭಾಗೀದಾರರು, ತಮ್ಮ ಅಂತರ್ಜಾಲ ಸಂಗಾತಿಯೊಂದಿಗೆ ತಾವು ಹೆಚ್ಚು ಹತ್ತಿರವಾದೆವು ಎಂಬ ಭಾವನೆಯನ್ನು ಬೆಳೆಸಿಕೊಂಡರು ಎಂಬುದನ್ನೂ ಫಲಿತಾಂಶವು ಸಾರುತ್ತದೆ.

ಅದೇ ರೀತಿ ಅಂಡರ್‌ವುಡ್ ಮತ್ತು ಫ್ಲಿಂಡ್‌ಲೆ (2004), ಪ್ರಾಥಮಿಕ ಸಂಬಂಧಗಳ ಮೇಲೆ, ನಿರ್ದಿಷ್ಟವಾಗಿ ಅಂತರ್ಜಾಲೇತರ ಸಂಬಂಧಗಳ ಮೇಲೆ ಅಂತರ್ಜಾಲ ಸಂಬಂಧಗಳ ಪರಿಣಾಮವನ್ನು, ಎರಡರಲ್ಲೂ ಗ್ರಹಿಸಬಹುದಾದ ಆಪ್ತತೆಯನ್ನು ಅಧ್ಯಯನ ಮಾಡಿದರು. ಈ ಅಧ್ಯಯನದಲ್ಲಿ, ವೈಯಕ್ತಿಕ ಸಮಸ್ಯೆಗಳನ್ನು ಕುರಿತು ಚರ್ಚಿಸುತ್ತಾ ರಹಸ್ಯಗಳನ್ನು ಹಂಚಿಕೊಳ್ಳುವ ಮೂಲಕ ಹೇಗೆ ಅಂತರಂಗವನ್ನು ಬಿಚ್ಚಿಡುವ ಮೂಲಕ ಆಪ್ತತೆಯನ್ನು ಸಾಧಿಸಿಕೊಳ್ಳಲಾಗಿದೆ ಎಂಬುದನ್ನು ಅಳೆಯಲಾಯಿತು. ಪ್ರಾಥಮಿಕ ಸಂಬಂಧಕ್ಕೆ ಹೋಲಿಸಿದಾಗ, ಅಂತರ್ಜಾಲ ಸಂಬಂಧಗಳಲ್ಲಿ ಗಣನೀಯವಾಗಿ ಹೆಚ್ಚಿನ ಮಟ್ಟದಲ್ಲಿ ತಮ್ಮ ಅಂತರಂಗವನ್ನು ಬಿಚ್ಚಿಡಲು ಸಾಧ್ಯವಾಗಿದೆ ಎಂದು ಭಾಗವಹಿಸಿದವರು ವರದಿ ಮಾಡಿದರು. ಇದಕ್ಕೆ ತದ್ವಿರುದ್ಧವಾಗಿ ಭಾಗವಹಿಸಿದವರ ಪ್ರಾಥಮಿಕ ಸಂಬಂಧಗಳಲ್ಲಿ ಈ ಮೊದಲು ಅಂತರಂಗವನ್ನು ಬಿಚ್ಚಿಡುವುದು ಹೆಚ್ಚಿತ್ತೆಂದೂ, ಆದರೆ ಈಗ ಆ ಒಂದು ಬಿಚ್ಚಿಕೊಳ್ಳುವ ಪ್ರಕ್ರಿಯೆ ಕಡಿಮೆಯಾಗಿದೆಯೆಂದೂ ವರದಿಯಾಯಿತು. (ಅಂಡರ್‌ವುಡ್ ಅಂಡ್ ಫ್ಲಿಂಡ್‌ಲೆ, 2004). ತಮ್ಮ ಬದುಕಿನಲ್ಲಿ ಆಪ್ತತೆಯ ಅವಶ್ಯಕತೆಯನ್ನು ಪೂರ್ಣಗೊಳಿಸಿಕೊಳ್ಳಲು ಭಾಗೀದಾರರು ಹೆಚ್ಚು ಹೆಚ್ಚಾಗಿ ಅಂತರ್ಜಾಲದತ್ತ ಹೊರಳಿಕೊಂಡರು ಎಂಬುದನ್ನು ಈ ಫಲಿತಾಂಶವು ಸೂಚಿಸುತ್ತದೆ.

ಈ ತೀರ್ಮಾನಗಳನ್ನು ಬೆಂಬಲಿಸುತ್ತಾ ಟಿಡ್‌ವೆಲ್ ಮತ್ತು ವಾಲ್ತರ್‌ರವರು (2002), ಮಾತಿನ ಆಚಿನ ಸಂವಹನಾ ಸಂಜ್ಞೆಗಳನ್ನು ಉಪಯೋಗಿಸಲು ಸಾಧ್ಯವಿಲ್ಲದಿರುವುದರಿಂದ ಸಿಎಂಸಿ ಮಾಧ್ಯಮವನ್ನು (ಗಣಕಯಂತ್ರ ಮಧ್ಯವರ್ತಿ ಸಂವಹನ) ಉಪಯೋಗಿಸುವ ಅಧ್ಯಯನದ ಭಾಗೀದಾರರು, ಎಫ್ಟಿಎಫ್ (ಮುಖಾಮುಖಿ) ಭಾಗೀದಾರರಿಗಿಂತ ಹೆಚ್ಚಾಗಿ

ಅಂತರಂಗವನ್ನು ಬಿಚ್ಚಿಡುವ ಮಾರ್ಗವನ್ನು ಉಪಯೋಗಿಸುತ್ತಾರೆ ಎಂಬ ಊಹಾನಿರ್ಣಯವನ್ನು (ಹೈಪಾಥಿಸಿಸ್) ಮಂಡಿಸಿದರು. ಸಿಎಂಸಿ ಭಾಗೀದಾರರು, ಸಿಎಂಸಿ ನಿರ್ಮಿಸುವ ತಡೆಗೋಡೆಗಳನ್ನು ಮೀರಲು ಹೆಚ್ಚು ಹೆಚ್ಚಾಗಿ ಆಪ್ತವಾದ ಪ್ರಶ್ನೆಗಳನ್ನು ಕೇಳಿದರು ಮತ್ತು ಬಿಚ್ಚಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿಕೊಂಡರು ಎಂಬುದನ್ನು ಅಧ್ಯಯನದಲ್ಲಿ ಗುರುತಿಸಲಾಯಿತು. ಟಿಡ್‌ವೆಲ್ ಮತ್ತು ವಾಲ್ತರ್ ಅವರು ತಮ್ಮ 2002ರ ಅಧ್ಯಯನದಲ್ಲಿ ಸಿಎಂಸಿ ಮತ್ತು ಎಫ್ ಟಿಟಿ ಎರಡೂ ಸ್ಥಿತಿಗಳಲ್ಲಿ ಪ್ರತಿಯೊಬ್ಬ ಭಾಗೀದಾರರ ಸಂಗಾತಿಗಳು ತಮ್ಮ ಸಂಬಂಧವು ಎಷ್ಟು ಆಪ್ತವಾಗಿದೆ ಎಂದು ಗ್ರಹಿಸುತ್ತಾರೆ ಎಂಬುದನ್ನು ಅಳತೆ ಮಾಡಿದರು. ಭಾಗೀದಾರರ ಸಂಗಾತಿಗಳು, ತಮ್ಮ ಸಿಎಂಸಿ ಸಂಗಾತಿಯು ಎಫ್ ಟಿಎಫ್ ಸಂಗಾತಿಗಿಂತ ಹೆಚ್ಚಿನ ಮಟ್ಟದಲ್ಲಿ ಆಪ್ತತೆಯ ಅಂತರ್‌ಕ್ರಿಯೆಗಳನ್ನು ನಡೆಸುವಲ್ಲಿ ಪರಿಣಾಮಕಾರಿಯಾಗಿದ್ದಾರೆ ಎಂದು ಹೇಳಿದ್ದನ್ನು ಸಂಶೋಧನಕಾರರು ಗುರುತಿಸಿದರು ಮತ್ತು ಭಾಗವಹಿಸಿದವರು ಹಾಗೂ ಅವರ ಸಂಗಾತಿಗಳು ಇಬ್ಬರೂ ಸಹ ತಮ್ಮ ಎಫ್ಟಿಎಫ್ ಸಂಬಂಧಕ್ಕಿಂತ ಸಿಎಂಸಿ ಸಂಬಂಧವೇ ಹೆಚ್ಚು ಆಪ್ತವಾಗಿದೆ ಎಂದು ಅಂದಾಜಿಸಿದರು.

## ಚರ್ಚೆ

2002ರಲ್ಲಿ ಕಮಿಂಗ್ಸ್ ಮತ್ತು ಇತರರು ತಮ್ಮ ಸಂಶೋಧನೆಯ ಪುರಾವೆಯು ಅಂತರ್ಜಾಲ ಸಾಮಾಜಿಕ ಸಂಬಂಧಗಳ ಪರಿಣಾಮವನ್ನು ಪರೀಕ್ಷಿಸಿದ ಇತರ ಅಧ್ಯಯನಗಳ ಮಾಹಿತಿಗೆ ವಿರುದ್ಧವಾಗಿದೆ ಎಂದು ನುಡಿದರು. ಉಳಿದ ಸಂಶೋಧನೆಗಳನ್ನು ಕುರಿತು ನಾವು ಮೇಲೆ ನಡೆಸಿದ ಚರ್ಚೆಗಳು ಈ ಹೇಳಿಕೆಗೆ ಬೆಂಬಲ ನೀಡುತ್ತವೆ. ಈ ಕೊರತೆಗಳಿಗೆ ಕೆಲವೊಂದು ಸಾಧ್ಯ ಸೈದ್ಧಾಂತಿಕ ವಿವರಣೆಗಳು ಇರಬಹುದು.

ಮೊದಲ ಹಂತದ ಶೀರ್ಷಿಕೆ ಕೇಂದ್ರದಲ್ಲಿರಬೇಕು, ದಪ್ಪ ಅಕ್ಷರಗಳಲ್ಲಿರಬೇಕು, ದೊಡ್ಡಕ್ಷರ (ಕ್ಯಾಪಿಟಲ್ ಲೆಟರ್) ಮತ್ತು ಸಣ್ಣಾಕ್ಷರ (ಸ್ಮಾಲ್ ಲೆಟರ್) ಇರಬೇಕು.ಇದನ್ನು ಟೈಟಲ್ ಕೇಸ್ ಎಂದೂ ಹೇಳಲಾಗುತ್ತದೆ. (ಎಂದರೆ ಮೊದಲ ಅಕ್ಷರ ಮಾತ್ರ ದೊಡ್ಡದು – ಅನುವಾದಕ)

### ಈ ಅಧ್ಯಯನದ ಇತಿಮಿತಿಗಳು

ಎರಡನೇ ಹಂತದ ಶೀರ್ಷಿಕೆ ಇದ್ದು ಅದು ಎಡಗಡೆಯ ಸೀಮಾ ರೇಖೆಗೆ ಹೊಂದಿಕೊಂಡಿರಲಿ, ದಪ್ಪ ಅಕ್ಷರ ಇರಲಿ ಮತ್ತು ಟೈಟಲ್ ಕೇಸ್ ಮಾದರಿ ಇರಲಿ.

ಕಮಿಂಗ್ಸ್ ಮುಂತಾದವರು ಪರಿಗಣನೆಗೆ ತೆಗೆದುಕೊಂಡ ಆಕರಗಳಲ್ಲಿಯೇ ಇರಬಹುದಾದ ಮಿತಿಗಳಿಂದಾಗಿಯೇ ನಾವು ಗುರುತಿಸಿರುವ ಇತಿಮಿತಿಗಳು ಉದ್ಭವಿಸಿರಬಹುದು. ಈ ಮಿತಿಗಳಿಗೆ ಕಾರಣಗಳು ತಾಂತ್ರಿಕ ನಿರ್ಬಂಧಗಳಲ್ಲಿರಬಹುದು, ಜನಸಂಖ್ಯಾ ಅಂಶಗಳಲ್ಲಿರಬಹುದು, ವಿಧಾನಗಳಿಗೆ ಸಂಬಂಧಿಸಿರಬಹುದು. ಇಂಥ ಪ್ರತಿಯೊಂದು ಇತಿಮಿತಿಯನ್ನೂ ಈ ಕೆಳಗೆ ವಿವರವಾಗಿ ಚರ್ಚಿಸಲಾಗುವುದು.

ಎಲ್ಲ ಸಂಶೋಧನೆಗಳಿಗೂ ತಮ್ಮದೇ ಆದ ಮಿತಿಗಳು ಇರುವುದರಿಂದ, ಪರೀಕ್ಷೆಗೆ ಒಳಪಟ್ಟಿರುವ ಲೇಖನಗಳ ಮಿತಿಗಳನ್ನು ಚರ್ಚಿಸುವುದು ಮುಖ್ಯವಾಗುತ್ತದೆ.

#### ತಾಂತ್ರಿಕ ಇತಿಮಿತಿಗಳು

ಮೂರನೇ ಹಂತದ ಶೀರ್ಷಿಕೆಯನ್ನು ಎಡಗಡೆಯ ಸೀಮಾ ರೇಖೆಯಿಂದ 0.5" ಜಾಗ ಬಿಟ್ಟು ಶುರು ಮಾಡಿಕೊಳ್ಳುವುದು. ಅದು ದಪ್ಪಕ್ಷರದಲ್ಲಿ ಇರಲಿ. (ಮೊದಲ ಪದದ ಮೊದಲ ಅಕ್ಷರ ಬಿಟ್ಟು ಉಳಿದವು ಸಣ್ಣ

ಮೊದಲನೆಯದಾಗಿ ಕಮಿಂಗ್ಸ್ ಮುಂತಾದವರು ಮಾಡಿದ ಪುನರ್‌ವಿಮರ್ಶಾ ಅಧ್ಯಯನವು (2002) ತಮ್ಮ ಸಿಎಂಸಿ ವಿಧಾನಕ್ಕಾಗಿ

ಇ-ಮೇಲ್ ಪತ್ರ ವ್ಯವಹಾರವನ್ನು ಮಾತ್ರ ಗಣನೆಗೆ ತೆಗೆದುಕೊಂಡಿತ್ತು. ಹೀಗಾಗಿ ಆ ಅಧ್ಯಯನವು ಲಭ್ಯವಿದ್ದ ಅನೇಕ ಪರ್ಯಾಯಗಳಲ್ಲಿ ಕೇವಲ ಒಂದೇ ಒಂದು ಸಂವಹನ ಮಾಧ್ಯಮಕ್ಕೆ ಸೀಮಿತವಾಗಿತ್ತು, ಉದಾ: ಹು ಮುಂತಾದವರು ಐಎಮ್ ಮೇಲೆ ಮಾಡಿದ ಅಧ್ಯಯನ (2004). ಅನೇಕ ವೈಯಕ್ತಿಕ ಲಕ್ಷಣಗಳಿರುವುದರಿಂದ ಐಎಮ್ ಹೆಚ್ಚು ವ್ಯಕ್ತಿಗತವಾದ ಸಿಎಂಸಿ ಆಗಿರುತ್ತದೆ. ಉದಾಹರಣೆಗೆ, ಯಾವ ವಿಳಂಬವೂ ಇಲ್ಲದೆ ತತ್‌ಕ್ಷಣದಲ್ಲಿ ಧ್ವನಿ ಸಂವಾದವೂ ಸೇರಿದಂತೆ ವಿಡಿಯೋ ಸಾಧ್ಯತೆಗಳೂ ಐಎಮ್ ಕಾರ್ಯಕ್ರಮಗಳಲ್ಲಿ ಲಭ್ಯವಿರುತ್ತವೆ ಮತ್ತು ಪಠ್ಯ ಚೌಕಟ್ಟುಗಳೂ ಸಹ ಸಂದೇಶದಲ್ಲಿರುವವರ ಚಿತ್ರದೊಂದಿಗೆ, ಐಚ್ಛಿಕ ಬಣ್ಣಗಳೊಂದಿಗೆ, ಪಠ್ಯದೊಂದಿಗೆ, ಭಾವಸೂಚಿ ಚಿನ್ಹೆಗಳೊಂದಿಗೆ ಲಭ್ಯವಿರುತ್ತವೆ. ಇಂಥ ಆಯ್ಕೆಗಳು ಹೆಚ್ಚಿನ ಭಾವಾಭಿವ್ಯಕ್ತಿಗೆ ಎಡೆಮಾಡಿಕೊಡುತ್ತವೆ. ಸಿಎಂಸಿ ಸೃಷ್ಟಿಸುವ ತಡೆಗೋಡೆಗಳನ್ನು ಮೀರಬಲ್ಲ ಗ್ರಾಹಕ ಸ್ನೇಹಿ ಸೇವೆಗಳಿರುತ್ತವೆ. ಇದನ್ನು ಟೆಡ್‌ವೆಲ್ ಮತ್ತು ವಾಲ್ಡರ್ (2002) ತಮ್ಮ ಅಧ್ಯಯನದಲ್ಲಿ ಹೇಳಿದ್ದಾರೆ. ಐಎಮ್‌ನಲ್ಲಿ ಇರುವಂಥ ವ್ಯಕ್ತಿಗತ ಲಕ್ಷಣಗಳಿಂದಾಗಿ ಅಂತರಂಗವನ್ನು ಬಿಚ್ಚಿಡುವುದು ಮತ್ತು ಆಪ್ತತೆ ಸಾಧ್ಯವಾಗಬಹುದು. ಈ ಸಾಧ್ಯತೆಗಳು ಇ-ಮೇಲ್ ವ್ಯವಹಾರದಲ್ಲಿ ವೈಯಕ್ತಿಕಗೊಳ್ಳುವುದಿಲ್ಲ.

**ಜನಸಂಖ್ಯಾ ಆಧಾರಿತ ಇತಿಮಿತಿಗಳು:** ಇ-ಮೇಲ್ ಒಡ್ಡುವ ಇತಿಮಿತಿಗಳಲ್ಲದೆ, ಕಮಿಂಗ್ಸ್ ಮತ್ತು ಇತರರು (2002) ತಮ್ಮ ಪುನರ್‌ವಿಮರ್ಶಾ ಅಧ್ಯಯನದಲ್ಲಿ ಗಮನಕ್ಕೆ ತೆಗೆದುಕೊಂಡದ್ದು ಬ್ಯಾಂಕ್ ಉದ್ಯೋಗಿಗಳು ಮತ್ತು ಕಾಲೇಜು ವಿದ್ಯಾರ್ಥಿಗಳನ್ನು ಎಂಬುದನ್ನೂ ನಾವು ಗಮನಿಸಬೇಕು. (ಜನಸಂಖ್ಯಾ ಮಾಹಿತಿಗಾಗಿ ಅನುಬಂಧ 'ಬಿ' ಯನ್ನು ನೋಡಿರಿ). ಸಂಶೋಧನೆಯಲ್ಲಿ ಭಾಗಿಯಾದವರು ನಡೆಸಿದ ಇ-ಮೇಲ್ ಮಾದರಿಯ ಸಿಎಂಸಿ, ಪ್ರಾಥಮಿಕವಾಗಿ ವ್ಯವಹಾರಕ್ಕಾಗಿ, ವೃತ್ತಿಪರ ಚಟುವಟಿಕೆಗಳಿಗಾಗಿ, ಶಾಲೆಗೆ ಸಂಬಂಧಿಸಿದ ವಿಷಯಗಳಿಗಾಗಿ ಮಾಡಿರುವ ಸಾಧ್ಯತೆ ಇದೆ; ಅದು ಒಂದು ಸಂಬಂಧವನ್ನು ಸೃಷ್ಟಿಸಲಿಕ್ಕಾಗಲೀ, ನಿರ್ವಹಿಸುವುದಕ್ಕಾಗಲೀ ಮಾಡಿರುವಂಥದಲ್ಲದಿರಬಹುದು. ಗಾಢವಾದ ಸಂಬಂಧವಿಲ್ಲದ ವ್ಯವಹಾರಗಳಲ್ಲಿ ಅಂತರಂಗವನ್ನು ಬಿಚ್ಚಿಕೊಳ್ಳುವುದಾಗಲೀ, ಆಪ್ತತೆಯಾಗಲೀ ಕಡಿಮೆ ಮಟ್ಟದಲ್ಲಿರುವುದು ನಿರೀಕ್ಷಿತ. ಏಕೆಂದರೆ ಇಲ್ಲಿ ನಡೆಯುವ ಸಂವಹನವು ಅಧಿಕಾರಿ ಮತ್ತು ನೌಕರ ಅಥವಾ ಪ್ರೊಫೆಸರ್ ಮತ್ತು ವಿದ್ಯಾರ್ಥಿ ಇವರ ನಡುವಿನದ್ದಾಗಿದ್ದು ಇಂಥ ವೃತ್ತಿ ಆಧಾರಿತ ಸಂಬಂಧಗಳಲ್ಲಿ ಆಪ್ತತೆ ಅವಶ್ಯವೂ ಅಲ್ಲ, ಅಪೇಕ್ಷಣೀಯವೂ ಅಲ್ಲ.

**ವಿಧಾನದ ಇತಿಮಿತಿಗಳು:** ಅದೇನೇ ಇರಲಿ, ವೃತ್ತಿ ನಿರತರ ಪತ್ರ ವ್ಯವಹಾರದ ಬದಲು ಕಮಿಂಗ್ಸ್ ಮೊದಲಾದವರು ನಡೆಸಿದ ಹೋಮ್‌ನೆಟ್ ಪ್ರಾಜೆಕ್ಟ್ನ ಪುನರ್‌ವಿಮರ್ಶೆಯು ಆಗಲೇ ಸ್ಥಾಪಿತವಾಗಿದ್ದ ಸಂಬಂಧಗಳ ಮೇಲೆ ಮತ್ತು ಸಂಬಂಧಗಳ ನಿರ್ವಹಣೆಯ ಮೇಲೆ ಸಿಎಂಸಿಯ ಪರಿಣಾಮವನ್ನು ಕುರಿತು ಗಮನವನ್ನು ಕೇಂದ್ರೀಕರಿಸಿತ್ತು. ಹೋಮ್‌ನೆಟ್ ಸಂಶೋಧಕರು, ಇ-ಮೇಲ್ ಸಂವಹನ ವಿಧಾನದ ಸಿಎಂಸಿಯ ಮೇಲೆ ಪೂರ್ತಿಯಾಗಿ ಅವಲಂಬಿತರಾಗಿದ್ದರಿಂದ, ಅಂತರ್ಜಾಲೇತರ ಸಂಬಂಧಗಳಿಗೆ ಹೋಲಿಸಿದಾಗ, ಅಂತರ್ಜಾಲ ಸಂಬಂಧಗಳಲ್ಲಿ ಆಪ್ತತೆ ಮತ್ತು ಸಾಮಿಪ್ಯದ ಮಟ್ಟ ಕಡಿಮೆ ಎಂದು ಕಂಡುಬಂದಿರುವುದಕ್ಕೆ ಕಾರಣವಾಗಿರಬಹುದು (ಕಮಿಂಗ್ಸ್ ಮುಂತಾದವರು-2002, ಉಲ್ಲೇಖಿಸಿದಂತೆ). ಇ-ಮೇಲ್‌ನಲ್ಲಿನ ವೈಯಕ್ತಿಕವಲ್ಲದ ಸಂವಹನದ ಅಡತಡೆಗಳು ಈ ಯೋಜನೆಯಲ್ಲಿ ಪ್ರಮುಖ

ಅಂಶವಾಗಿರಬಹುದು ಮತ್ತು ಇದು ಅಂತರ್ಜಾಲ ಸಂಗಾತಿಗಳಲ್ಲಿ ಆಪ್ತತೆಯ ಕೊರತೆ ಉಂಟಾಗುವಂತೆ ಮಾಡಿರಬಹುದು. ಸ್ಥಾಪಿತ ಹಾಗೂ ವ್ಯತಿನಿರತ ಈ ಎರಡೂ ಸಂಬಂಧಗಳಲ್ಲಿ ಸಿಎಂಸಿಯ ಪರ್ಯಾಯ ವಿಧಾನಗಳನ್ನು ಅಧ್ಯಯನ ಮಾಡಿದ್ದರೆ, ಪ್ರಾಯಶಃ ಆಗ ಈ ಫಲಿತಾಂಶಗಳು ಮೊದಲು ಹೇಳಿದ ಸಂಶೋಧನೆಯ ಫಲಿತಾಂಶಗಳನ್ನು ಹೋಲುತ್ತಿದ್ದವು.

## ಅಂತರ್ಜಾಲ ಸಂವಹನ ಕುರಿತಾದ ವಿಭಿನ್ನ ಲಕ್ಷಣ ನಿರೂಪಣೆಗಳು

## ನಿರ್ಣಯಗಳು ಮತ್ತು ಮುಂದಿನ ಅಧ್ಯಯನ

ಅಂತರ್ಜಾಲ ಮತ್ತು ಅಂತರ್ಜಾಲೇತರ ಸಂಬಂಧಗಳ ಮೇಲೆ ಸಿಎಂಸಿಯ ನಿಜವಾದ ಪರಿಣಾಮವನ್ನು ಕುರಿತು ಸಂಪೂರ್ಣ ತಿಳುವಳಿಕೆಯನ್ನು ಗಳಿಸಿಕೊಳ್ಳಬೇಕೆಂದರೆ ಸಿಎಂಸಿಯ ಎಲ್ಲಾ ಅಂಶಗಳ ಬಗ್ಗೆ ಪರೀಕ್ಷೆ ಮಾಡುವಂಥ ಅಧ್ಯಯನವನ್ನು ಕೈಗೊಳ್ಳುವುದು ಅವಶ್ಯಕ. ಇ-ಮೇಲ್, ಐಎಮ್, ವಾಯ್ಸ್ ಚಾಟ್, ವಿಡಿಯೊಚಾಟ್, ಅಂತರ್ಜಾಲ ಪತ್ರಿಕೆಗಳು ಮತ್ತು ಡೈರಿಗಳು, ಮೆಸೇಜ್‌ಬೋರ್ಡ್ ಇರುವ ಅಂತರ್ಜಾಲ ಸಾಮಾಜಿಕ ಗುಂಪುಗಳು, ಚಾಟ್‌ರೂಮ್‌ಗಳು ಇವೆಲ್ಲಾ ಇದರಡಿಯಲ್ಲಿ ಬರುತ್ತವಾದರೂ ಅಧ್ಯಯನವು ಇದಿಷ್ಟಕ್ಕೇ ಸೀಮಿತವಾಗಬೇಕಿಲ್ಲ. ಸಂಬಂಧದ ಮೇಲೆ ಪ್ರತಿಯೊಂದು ವಿಧಾನದ ಪ್ರಭಾವಗಳು ವಿಭಿನ್ನವಾಗಿರಬಹುದು, ಇದಕ್ಕೆ ಇ-ಮೇಲ್ ಮತ್ತು ಐಎಮ್ ಪತ್ರ ವ್ಯವಹಾರದ ನಡುವೆ ಕಂಡುಬರುವಂಥ ವ್ಯತ್ಯಾಸವೇ ಸಾಕ್ಷಿ. ವ್ಯಕ್ತಿಗಳ ಬದುಕಿನಲ್ಲಿ ಪ್ರತಿಯೊಂದೂ ಸಂವಹನ ಮಾಧ್ಯಮದ ಪ್ರಭಾವವು ಹೆಚ್ಚಾಗುತ್ತಿದ್ದಂತೆ, ಅಂತರ್ಜಾಲ ಮತ್ತು ಅಂತರ್ಜಾಲೇತರ ಸಂಬಂಧಗಳ ರೂಪುಗೊಳ್ಳುವಿಕೆ, ನಿರ್ವಹಣೆ ಮತ್ತು ಅವುಗಳ ಸಮಾಪ್ತಿಯ ಬಗೆಗೆ, ಸಿಎಮ್‌ಸಿಯ ಎಲ್ಲ ವಿಧಾನಗಳ ಪರಿಣಾಮದ ಬಗೆಗೆ ಪರೀಕ್ಷೆ ನಡೆಸುವುದು ಮುಖ್ಯವಾಗುತ್ತದೆ.

ನಿರ್ಣಯವು ಪ್ರಬಂಧವು ಯಾವ ಸಮಸ್ಯೆಯ ಕುರಿತು ಚರ್ಚಿಸುತ್ತದೆಯೋ ಅದನ್ನು ಪುನರುಚ್ಚರಿಸುತ್ತದೆ ಮತ್ತು ಇನ್ನಷ್ಟು ಸಂಶೋಧನೆಗೆ ಕ್ಷೇತ್ರಗಳನ್ನು ಗುರುತಿಸುತ್ತದೆ.

http://owl.english.purdue.edu/owl/resource/724/04/

## ಅಂತರ್ಜಾಲ ಸಂವಹನದ ವಿಭಿನ್ನ ಲಕ್ಷಣ ನಿರೂಪಣೆಗಳು

## ಉಲ್ಲೇಖಗಳು


- ಕಮ್ಮಿಂಗ್ಸ್, ಜೆ.ಎನ್, ಬಟ್ಲರ್. ಬಿ ಮತ್ತು ಕ್ರಾವುತ್. ಆರ್ (2002)

  ('ಅಂತರ್ಜಾಲ ಸಾಮಾಜಿಕ ಸಂಬಂಧಗಳ ಗುಣಮಟ್ಟ'. ಎ.ಸಿ.ಎಮ್‌ನ ಸಂವಹನಗಳು, 45(7), 103-108).

  ದಿ ಕ್ವಾಲಿಟಿ ಆಫ್ ಆನ್‌ಲೈನ್ ಸೋಷಿಯಲ್ ರಿಲೇಶನ್‌ಶಿಪ್ಸ್, ಕಮ್ಯುನಿಕೇಶನ್ಸ್ ಆಫ್ ದಿ ಎಸಿಎಂ 45(7), 103-108]

- ಹು.ವೈ, ವುಡ್.ಜೆ.ಎಫ್, ಸ್ಮಿತ್. ವಿ, ಮತ್ತು ವೆಸ್ಟ್ ಬ್ರೂಕ್. ಎನ್, (2004) (ತತ್ಕ್ಷಣ ಸಂದೇಶ ಕಳಿಸುವಿಕೆ ಹಾಗೂ ಆಪ್ತತೆಯ ನಡುವಿನ ಸಂಬಂಧವನ್ನು ಪರೀಕ್ಷಿಸುವುದು).
  'ಎಕ್ಸಮಿನಿಂಗ್ ದಿ ರಿಲೇಶನ್‌ಶಿಪ್ ಬಿಟ್ವೀನ್ ಇನ್‌ಸ್ಟಂಟ್ ಮೆಸೇಜಿಂಗ್ ಅಂಡ್ ಇಂಟಿಮೆಸಿ.
  ಜರ್ನಲ್ ಆಫ್ ಕಂಪ್ಯೂಟರ್ ಮೀಡಿಯೇಟಡ್ ಕಮ್ಯುನಿಕೇಶನ್ 10, 38-48.

- ಟಿಡೆವೆಲ್. ಎಲ್.ಸಿ ಅಂಡ್ ವಾಲ್ತರ್. ಜೆ.ಬಿ (2002) ("ಬಹಿರಂಗಪಡಿಸಿಕೊಳ್ಳುವುದು, ಅಭಿಪ್ರಾಯ ಸೃಷ್ಟಿ ಮತ್ತು ಪರಸ್ಪರ ಮೌಲ್ಯಮಾಪನ ಇವುಗಳ ಮೇಲೆ ಕಂಪ್ಯೂಟರ್ ಮಾಧ್ಯಮದ ಸಂವಹನದ ಪರಿಣಾಮಗಳು"
  ಪ್ರತಿಬಾರಿ ಒಬ್ಬರು ಇನ್ನೊಬ್ಬರನ್ನು ಕೊಂಚ ಅರ್ಥ ಮಾಡಿಕೊಳ್ಳುವುದು). "ಕಂಪ್ಯೂಟರ್ ಮೀಡಿಯೇಟಡ್ ಕಮ್ಯುನಿಕೇಶನ್ ಎಫೆಕ್ಟ್ಸ್ ಆನ ಡಿಸ್‌ಕ್ಲೋಶರ್, ಇಂಪ್ರೆಶನ್ಸ್ ಅಂಡ್ ಇಂಟರ್ ಪರ್ಸನಲ್ ಇವಾಲ್ಯುಯೇಶನ್ಸ್: ಗೆಟಿಂಗ್ ಟು ನೊ ಒನ್ ಅನದರ್ ಎ ಬಿಟ್ ಅಟ್ ಎ ಟೈಮ್. ಹ್ಯೂಮನ್ ಕಮ್ಯುನಿಕೇಶನ್ ರಿಸರ್ಚ್ 28, 317-348.

- ಅಂಡರ್‌ವುಡ್. ಎಚ್, ಅಂಡ್ ಫ್ಲಿಂಡ್ಲೆ. ಬಿ (2004) ("ಅಂತರ್ಜಾಲ ಸಂಬಂಧ ಮತ್ತು ಪ್ರಾಥಮಿಕ ಸಂಬಂಧಗಳ ಮೇಲೆ ಅವುಗಳ ಪರಿಣಾಮ") "ಇಂಟರ್‌ನೆಟ್ ರಿಲೇಶನ್‌ಶಿಪ್ಸ್ ಅಂಡ್ ದೇರ್ ಇಂಪಾಕ್ಟ್ ಆನ್ ಪ್ರೈಮರಿ ರಿಲೇಶನ್‌ಶಿಪ್ಸ್". ಬಿಹೇವಿಯರ್ ಚೇಂಜ್. 21(2), 127-140.

> ಉಲ್ಲೇಖಗಳ ಪಟ್ಟಿಯನ್ನು ಹೊಸ ಪುಟದಲ್ಲಿ ಆರಂಭಿಸಿ, ಉಲ್ಲೇಖಗಳ ಶೀರ್ಷಿಕೆಯನ್ನು ಕೇಂದ್ರಕ್ಕೆ ತನ್ನಿ. ಅಕ್ಷರಾನುಕ್ರಮವಾಗಿ ಪಟ್ಟಿಯಲ್ಲಿ ಹೆಸರುಗಳನ್ನು ಒಂದರ ಕೆಳಗೆ ಒಂದರಂತೆ ಬರೆಯಿರಿ. ಶೀರ್ಷಿಕೆಗಳಿಗೆ ಕೆಳಗೆ ಗೆರೆ ಎಳೆಯುವುದಾಗಲೀ ಇಟಾಲಿಕ್ ಅಕ್ಷರ ಉಪಯೋಗಿಸುವುದಾಗಲೀ ಬೇಡ. ಸಾಲಿನಿಂದ ಸಾಲಿಗೆ ಎಡರಷ್ಟು ಖಾಲಿ ಜಾಗ ಇರಲಿ. ಪ್ರಬಂಧದಲ್ಲಿ ಹೆಸರಿಸಿರುವ ಪ್ರತಿಯೊಂದು ಲೇಖನವೂ ಇಲ್ಲಿ ಸೇರಲ್ಪಡಬೇಕು.

## ಅಂತರ್ಜಾಲ ಸಂವಹನ ಕುರಿತಾದ ವಿಭಿನ್ನ ಲಕ್ಷಣ ನಿರೂಪಣೆಗಳು

## ಅನುಬಂಧ – ಎ

ಅನುಬಂಧದ ಮೊದಲನೆಯ ವಾಕ್ಯವು ಎಡಗಡೆಯ ಸೀಮಾ ರೇಖೆಗೆ ಹೊಂದಬೇಕು. ಮುಂದಿನ ಪ್ಯಾರಾಗಳು ಕೊಂಚ ಜಾಗ ಬಿಟ್ಟು (ಇಂಡೆಂಟ್) ಶುರುವಾಗಲಿ.

ನಿಮ್ಮ ಕೈಬರಹದ ಪಠ್ಯದಲ್ಲಿ ಹೇಗೆ ಅನುಬಂಧದಲ್ಲಿ ಬರಬೇಕಾದ ಮಾಹಿತಿಗೆ ಚಿಹ್ನೆ ನೀಡಿರುತ್ತೀರೋ ಅದೇ ರೀತಿಯಲ್ಲಿ ಕೋಷ್ಟಕದಲ್ಲೂ ಅವುಗಳನ್ನು ನಮೂದಿಸಿ. ಎಂದರೆ ಅನುಬಂಧದಲ್ಲಿ 'ಎ' ಎಂದು ಬರುವ ಕೋಷ್ಟಕ ಅಥವಾ ಯಾವುದೇ ವಿವರವು ಪಠ್ಯದಲ್ಲಿ ಬಂದಾಗ ಅದೇ ರೀತಿ ಹೆಸರಿಸಿ.

ಹೋಮ್‌ನೆಟ್ ಯೋಜನೆಯು 1995ರಲ್ಲಿ ಕಾರ್ನೆಗಿ ಮೆಲ್ಲನ್ ವಿಶ್ವವಿದ್ಯಾಲಯದಲ್ಲಿ ಆರಂಭವಾಗಿದ್ದು, ಹೋಮ್ ಇಂಟರ್‌ನೆಟ್ ಉಪಯೋಗದ ಬಗ್ಗೆ ಪರೀಕ್ಷಿಸುವ ಉದ್ದೇಶವಿರುವ ಅನೇಕ ಅಧ್ಯಯನಗಳನ್ನು ಹೊಂದಿದೆ. ಸಂಶೋಧಕರು ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಕಾರಣವೇನೆಂದರೆ ಅಂತರ್ಜಾಲವು ಮೊದಲಿಗೆ ವೈಜ್ಞಾನಿಕ ಹಾಗೂ ಕಾರ್ಪೊರೇಟ್ ಉಪಯೋಗಗಳಿಗೆ ಎಂದು ಅಸ್ತಿತ್ವಕ್ಕೆ ಬಂದಿತ್ತು. ಇಂಟರ್ನೆಟ್ ಇತರರ ಬಳಕೆಗೂ (ಹೋಮ್‌ಯೂಸೇಜ್) ಬಂದದ್ದು ಒಂದು ಅನಿರೀಕ್ಷಿತ ವಿದ್ಯಮಾನವಾಗಿದ್ದು ವಿಸ್ತೃತ ಅಧ್ಯಯನಕ್ಕೆ ಯೋಗ್ಯವಾಗಿದೆ.

ಪ್ರತಿಯೊಂದು ಹೋಮ್‌ನೆಟ್ ಅಧ್ಯಯನವೂ ವೈಯಕ್ತಿಕ ಅಂತರ್ಜಾಲ ಉಪಯೋಗದ ಒಂದು ಮಟ್ಟವನ್ನು ಶೋಧಿಸಿತು. ಉದಾ: ಚಾಟಿಂಗ್, ಅಂತರ್ಜಾಲ ಆಟಗಳು, ಓದುವುದು, ವಾರ್ತೆಗಳು ಇತ್ಯಾದಿ. ಕಳೆದ ಕೆಲವು ವರ್ಷಗಳಲ್ಲಿ ಸಾಮಾಜಿಕ ಜಾಲವಿಸ್ತರಣೆ (ಸೋಷಿಯಲ್ ನೆಟ್‌ವರ್ಕಿಂಗ್)ಯು ವಿಪರೀತವಾಗಿ ಸ್ಫೋಟಗೊಂಡಿದ್ದು, ಅದೂ ಸಹ ಹೆಚ್ಚುವರಿ ಸಂಶೋಧನೆಗೆ ಅರ್ಹವಾದದ್ದು ಎಂಬುದು ಸಾಬೀತಾಗಿದೆ. ಹೋಮ್‌ನೆಟ್ ಅಧ್ಯಯನಗಳ ವಿಸ್ತಾರವಾದ ವಿವರಣೆಗಾಗಿ ಕೋಷ್ಟಕ A-1 ಅನ್ನು ನೋಡಿರಿ.

ಪ್ರತಿಯೊಂದು ಅನುಬಂಧವನ್ನೂ ಹೊಸ ಪುಟದಲ್ಲಿ ಆರಂಭಿಸಿ, ಅನುಬಂಧ ಎಂಬುದು ಮೇಲುಗಡೆ ಕೇಂದ್ರದಲ್ಲಿರಲಿ. ಪ್ರತಿ ಅನುಬಂಧವನ್ನು ಗುರುತಿಸಲು ಇಂಗ್ಲಿಷ್ ವರ್ಣಮಾಲೆಯ ಒಂದು ದೊಡ್ಡ ಅಕ್ಷರವನ್ನು ಉಪಯೋಗಿಸಿ ಉದಾ: A, ಹೆಚ್ಚು ಅನುಬಂಧ ಇದ್ದರೆ B ಇತ್ಯಾದಿ. ನಿಮ್ಮ ಪಠ್ಯದಲ್ಲಿ ಅನುಬಂಧಗಳು ಒಂದಕ್ಕಿಂತ ಹೆಚ್ಚಿದ್ದರೆ ಆಗ ಅದನ್ನು ಬಹು ವಚನದಲ್ಲಿ ಎಂದರೆ 'ಅನುಬಂಧಗಳು' ಎಂದು ಬರೆಯಬೇಕು. (ಎಪಿಎ ಮಾತ್ರ)

**ಕೋಷ್ಟಕ A-1**

ವರ್ಷಾನುಸಾರವಾಗಿ ಹೋಂನೆಟ್ ಅಧ್ಯಯನಗಳ ವಿವರ

| ಅಧ್ಯಯನದ ವರ್ಷ | ಅಧ್ಯಯನದ ಪರಿವಿಡಿ |
|---|---|
| 1995-96 | 93 ಕುಟುಂಬಗಳು ಶಾಲೆ ಅಥವಾ ಸಮುದಾಯ ಸಂಘಟನೆಗಳಲ್ಲಿ ತೊಡಗಿದ್ದವು |
| 1997-99 | ಮನೆ ವ್ಯವಹಾರವಿದ್ದ 25 ಕುಟುಂಬಗಳು 1998-99 ಪಿಟ್ಸ್ ಬರ್ಗ್ 151 ಕುಟುಂಬಗಳು |
| 2000-2002 | ರಾಷ್ಟ್ರೀಯ ಸರ್ವೇಕ್ಷಣೆ. |

**ಅಂತರ್ಜಾಲ ಸಂವಹನದ ವಿಭಿನ್ನ ಲಕ್ಷಣ ನಿರೂಪಣೆಗಳು**

**ಅನುಬಂಧ ಬಿ**

**ಕಮಿಂಗ್ಸ್ ಮತ್ತಿತರರ ಪುನರ್‌ವಿಮರ್ಶೆಗೆ (2002) ಜನಸಂಖ್ಯಾಧಾರಿತ ಮಾಹಿತಿ.**

ಯಾವುದಾದರೂ ಅನುಬಂಧದಲ್ಲಿ ಪೂರ್ತಿ ಕೋಷ್ಟಕ ಅಥವಾ ಚಿತ್ರ ಇದ್ದಲ್ಲಿ, ಆಗ ಕೋಷ್ಟಕ ಅಥವಾ ಚಿತ್ರದ ಹೆಸರೇ ಅನುಬಂಧದ ಹೆಸರಾಗುತ್ತದೆ.

· ಅಂತರಾಷ್ಟ್ರೀಯ ಬ್ಯಾಂಕರ್‌ಗಳು
· ಕಾಲೇಜು ವಿದ್ಯಾರ್ಥಿಗಳು
· ಕಾಲೇಜು ಪ್ರಾಧ್ಯಾಪಕರು.
· ಪ್ರೌಢಶಾಲಾ ವಿದ್ಯಾರ್ಥಿಗಳು.